ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 80/2021

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಸಿರುಗುಪ್ಪ ಪೊಲೀಸ್ ಠಾಣೆ.

-ವಿರುದ್ಧ-

ಆರೋಪಿತರು ಃ

1. ಮಹಾದೇವ ವಿ. ತಂದೆ ಸಣ್ಣ ಮಾರೆಪ್ಪ, ವಃ 26 ವರ್ಷ ವಾಸಃ ರಾರಾವಿ ಗ್ರಾಮ ಸಿರುಗುಪ್ಪ ತಾಃ
2. ಸಣ್ಣ ಮಹಾದೇವ ತಂದೆ ಸಣ್ಣ ಮಾರೆಪ್ಪ, ವಃ 25 ವರ್ಷ ವಾಸಃ ರಾರಾವಿ ಗ್ರಾಮ, ಸಿರುಗುಪ್ಪ ತಾಃ
3. ನರಸಿಂಹ ಟಿ.ವೈ. ತಂದೆ ತಾಯಪ್ಪ, ವಃ 45 ವರ್ಷ, ವಾಸಃ ಸಿರುಗುಪ್ಪ.
4. ರಾಮಣ್ಣ ಜಿ.ವಿ. ತಂದೆ ಸಣ್ಣ ಹನುಮಂತ, ವಃ 51 ವರ್ಷ, ವಾಸಃ ಸಿರುಗುಪ್ಪ ಟೌನ್.

<u>ದೋಷಾರೋಪಣೆ</u>

ನಾನು ಹಾಜಿಹುಸೇನಸಾಬ ಯಾದವಾಡ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಸಿರುಗುಪ್ಪ ಈ ಮೂಲಕ ನಿಮ್ಮ ಮೇಲೆ ಹೊರೆಸುವ ಆರೋಪಣೆ ಏನೆಂದರೆ ಃ

1 ಮತ್ತು 2 ನೇ ಆರೋಪಿತರಾದ ನೀವು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು ಇವರ ಫಲಾನುಭವಿಯಾಗಿ ದಿನಾಂಕ 27-12-2017 ರಂದು ನೊಂದಣಿ ಮಾಡಿಸಿದ್ದು, ಆರೋಪಿ-1 ರವರು ಗುರುತಿನ ಚೀಟಿ ನಂ.791/2017 ದಿಃ 27-12-2017 ಮತ್ತು ಆರೋಪ-2 ರವರ ನಂ.794/2017 ದಿಃ 27-12-2017 ಇದ್ದು, ಆರೋಪಿ-1 ರವರು ಚಾಸಾ-4/ಶ್ರೀಮತಿ ಯಲ್ಲಮ್ಮ ರವರೊಂದಿಗೆ ಮತ್ತು ಆರೋಪಿ-2 ರವರು ಚಾಸಾ-5/ಶ್ರೀಮತಿ ಉಮಾದೇವಿ ಇವರೊಂದಿಗೆ ದಿನಾಂಕ 19-08-2018 ರಂದು ರಾರಾವಿಯ ಬಾಳಪ್ಪ ತಾತ ದೇವಸ್ಥಾನದಲ್ಲಿ ಸಾಮೂಹಿಕ ಮದುವೆಗಳಲ್ಲಿ ಮದುವೆಯಾಗಿದ್ದು, ಇವರು ಸರ್ಕಾರದಿಂದ ಮದುವೆಯ ಸಹಾಯಧನ ಪಡೆಯಲು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ನಿಯಂತ್ರಣ ಮತ್ತು ಸೇವಾ ಷರತ್ತುಗಳು) (ಕರ್ನಾಟಕ) ನಿಯಮಗಳು 2006 ರ ನಿಯಮ 48 ರ ಪ್ರಕಾರ ನೊಂದಾಯಿತ ನಿರ್ಮಾಣ ಕಾರ್ಮಿಕರು ಮದುವೆಯ ಸಹಾಯಧನ ಪಡೆಯಲು ಸದಸ್ಯತ್ವ ನೊಂದಣಿಯಾದ

ದಿನಾಂಕದಿಂದ ಮದುವೆಯಾದ ದಿನಾಂಕದವರೆಗೆ ಒಂದು ವರ್ಷ ಸದಸ್ಯತ್ವವನ್ನು ಪೂರೈಸಿರಬೇಕು, ಆದರೆ ಸದರಿ ಆರೋಪಿತರು ಸದಸ್ಯತ್ವ ನೊಂದಣಿ ಮಾಡಿಸಿ, 8 ತಿಂಗಳು 8 ದಿನಗಳ ನಂತರ ಮದುವೆಯಾಗಿದ್ದು, ಆದುದರಿಂದ ನೀವು ಕಲಂ ಭಾ.ದಂ.ಸಂ.ಕಲಂ. 471, 511 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಮಾಡಿರುತ್ತೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಮೋಸಮಾಡುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಮೋಸದಿಂದ ಸರ್ಕಾರದ ಹಣ ಲಪಟಾಯಿಸಲು ಪ್ರಯತ್ನಿಸಿರುತ್ತೀರಿ. ಆದ್ದರಿಂದ ನೀವು ಕಲಂ ಭಾ.ದಂ.ಸಂ.ಕಲಂ.420 ರಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಮಾಡಿರುತ್ತೀರಿ.

ಅದೇ ರೀತಿ ಮೇಲೆ ಹೇಳಿದ ದಿವಸ, ವೇಳೆ ಮತ್ತು ಸ್ಥಳದಲ್ಲಿ 3 ಮತ್ತು 4 ನೇ ಆರೋಪಿತರಾದ ನೀವು ಹೇಗಾದರು ಮಾಡಿ ಸರ್ಕಾರದ ಹಣ ಲಪಟಾಯಿಸುವ ಉದ್ದೇಶದಿಂದ ಆರೋಪಿ-1 ಮತ್ತು 2 ರವರೊಂದಿಗೆ ಶಾಮೀಲಾಗಿ, ಎಲ್ಲರೂ ಸೇರಿ ಆರೋಪಿ-1 ಮತ್ತು 2 ರವರು ದಿನಾಂಕ 4-01-2019 ರಂದು ಮದುವೆಯಾಗಿರುತ್ತಾರೆಂದು ಸುಳ್ಳು ದಾಖಲೆಗಳನ್ನು ಸೃಷ್ಠಿಸಿ, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮದುವೆ ಸಹಾಯಧನ ನೀಡುವಂತೆ ಅರ್ಜಿ ಸಲ್ಲಿಸಿರುತ್ತೀರಿ. ಆದ್ದರಿಂದ ನೀವು ಕಲಂ ಭಾ.ದಂ.ಸಂ.ಕಲಂ. 465, 468 ಅಡಿಯಲ್ಲಿ ಶಿಕ್ಷಾರ್ಹ ಅಪರಾದವನ್ನು ಮಾಡಿರುತ್ತೀರಿ.

ದಿನಾಂಕಃ 23.04.2024 ಪ್ರ.ದ.ನ್ಯಾ.ದಂ., ಸಿರುಗುಪ್ಪ.

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ
ಕ್ರಿಮಿನಲ್ ಸಂಖ್ಯೆ 80/2021

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್
ಪೊಲೀಸ್, ಸಿರುಗುಪ್ಪ ಪೊಲೀಸ್ ಠಾಣೆ.

-ವಿರುದ್ಧ–

ಆರೋಪಿತರು ಃ

1. **ಮಹಾದೇವ ವಿ. ತಂದೆ ಸಣ್ಣ ಮಾರೆಪ್ಪ, ವಃ 26 ವರ್ಷ**
**ವಾಸಃ ರಾರಾವಿ ಗ್ರಾಮ ಸಿರುಗುಪ್ಪ ತಾಃ**

**<u>ದೋಷಾರೋಪಣೆ</u>**

ಪ್ರಶ್ನೆ ಃ ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರಃ ಆರೋಪಿ-1 ಃ

ಪ್ರಶ್ನೆ ಃ ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ ಆರೋಪಿ-1 ಃ

**(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).**

**ದಿನಾಂಕಃ** 23.04.2024 **ಪ್ರ.ದ.ನ್ಯಾ.ದಂ., ಸಿರುಗುಪ್ಪ.**

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 80/2021

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್
**ಪೊಲೀಸ್, ಸಿರುಗುಪ್ಪ ಪೊಲೀಸ್ ಠಾಣೆ.**

-ವಿರುದ್ಧ–

ಆರೋಪಿತರು :

2. **ಸಣ್ಣ ಮಹಾದೇವ ತಂದೆ ಸಣ್ಣ ಮಾರೆಪ್ಪ, ವಃ 25 ವರ್ಷ**
**ವಾಸಃ ರಾರಾವಿ ಗ್ರಾಮ, ಸಿರುಗುಪ್ಪ ತಾಃ**

**<u>ದೋಷಾರೋಪಣೆ</u>**

ಪ್ರಶ್ನೆ : ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?
ಉತ್ತರಃ ಆರೋಪಿ-2 :

ಪ್ರಶ್ನೆ : ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ ಆರೋಪಿ-2 :

**(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).**

**ದಿನಾಂಕಃ** 23.04.2024 **ಪ್ರ.ದ.ನ್ಯಾ.ದಂ., ಸಿರುಗುಪ್ಪ.**

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 80/2021

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಸಿರುಗುಪ್ಪ ಪೊಲೀಸ್ ಠಾಣೆ.

-ವಿರುದ್ಧ–

ಆರೋಪಿತರು :

3. **ನರಸಿಂಹ ಟಿ.ವೈ. ತಂದೆ ತಾಯಪ್ಪ, ವಃ** 45 **ವರ್ಷ, ವಾಸಃ ಸಿರುಗುಪ್ಪ.**

**ದೋಷಾರೋಪಣೆ**

ಪ್ರಶ್ನೆ : ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರಃ ಆರೋಪಿ-3 :

ಪ್ರಶ್ನೆ : ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ ಆರೋಪಿ-3 :

**(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).**

**ದಿನಾಂಕಃ** 23.04.2024 **ಪ್ರ.ದ.ನ್ಯಾ.ದಂ., ಸಿರುಗುಪ್ಪ.**

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಸಿರುಗುಪ್ಪ

ಕ್ರಿಮಿನಲ್ ಸಂಖ್ಯೆ 80/2021

**ಪಿರ್ಯಾದಿಃ** ಸರಕಾರದ ಪರ ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಸಿರುಗುಪ್ಪ ಪೊಲೀಸ್ ಠಾಣೆ.

-ವಿರುದ್ಧ–

ಆರೋಪಿತರು :

4. **ರಾಮಣ್ಣ ಜಿ.ವಿ. ತಂದೆ ಸಣ್ಣ ಹನುಮಂತ,**
**ವಃ** 51 **ವರ್ಷ, ವಾಸಃ ಸಿರುಗುಪ್ಪ ಟೌನ್.**

**ದೋಷಾರೋಪಣೆ**

ಪ್ರಶ್ನೆ : ಇದೀಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಉತ್ತರಃ ಆರೋಪಿ-4 :

ಪ್ರಶ್ನೆ : ನೀವು ತಪ್ಪೊಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಪರ ಪ್ರತಿರಕ್ಷಣೆ ಏನಾದರೂ ಇದೆಯೇ? ವಿಚಾರಣೆ ಆಗಬೇಕೇ?

ಉತ್ತರಃ ಆರೋಪಿ-4 :

**(ಮೇಲಿನ ಆರೋಪಿತರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಸದ್ರಿ ಆರೋಪಿತರಿಂದ ಪಡೆದಿದ್ದು ಅದು ಸತ್ಯಾಂಶವನ್ನು ಹೊಂದಿದೆಯೆಂದು ಪ್ರಮಾಣೀಕರಿಸಲಾಗಿದೆ).**

**ದಿನಾಂಕಃ** 23.03.2024 **ಪ್ರ.ದ.ನ್ಯಾ.ದಂ., ಸಿರುಗುಪ್ಪ.**